(ದಿನಾಂಕಃ 06.01.2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಹೆಚ್. ಪಿ. ವಿ ರವರಿಂದ ಃ-**

1. ನಾನು ವಸತಿಗೃಹದಲ್ಲಿ ಅಡುಗೆ ಕೆಲಸ ಮಾಡುತ್ತೇನೆ. ಸಾಮಾನ್ಯವಾಗಿ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಮನೆಯ ಬಾಡಿಗೆ ಪಡೆಯಬೇಕಾದರೆ ಬಾಡಿಗೆ ಕಟ್ಟಿ ವಾಸವಾಗಬೇಕಾಗುತ್ತದೆ ಎಂದರೆ ಸರಿ. ಸದರಿ ಮನೆಗೆ ಬೇಕಾಗುವ ನೀರು, ರಿಪೇರಿಯನ್ನು ಸದರಿ ಇಲಾಖೆಯವರೇ ಮಾಡುತ್ತಾರೆ ಎಂದರೆ ಸರಿ.

2. ನಾನು ಎಷ್ಟು ವರ್ಷ ಸರ್ಕಾರಿ ಕೆಲಸದಲ್ಲಿ ಇರುತ್ತೇನೆ ಆ ಅವಧಿವರೆಗೆ ಮಾತ್ರ ನಾನು ಸದರಿ ಮನೆಯಲ್ಲಿ ವಾಸವಾಗಬಹುದು ಎಂದು ಸೂಚಿಸಿದರೆ ಸರಿ. ನಾನು ನನ್ನ ಸರ್ಕಾರಿ ಕೆಲಸದಿಂದ ಬೇರೆ ಸ್ಥಳಕ್ಕೆ ವರ್ಗಾವಣೆ ಆದ ನಂತರ ದಾವಾ ಆಸ್ತಿಯ ಮನೆಯನ್ನು ಬಿಡದೇ ಅಲ್ಲೇ ವಾಸವಾಗಿರುತ್ತೇನೆ ಎಂದರೆ ಸರಿ.

3. ಸದರಿ ಮನೆಯನ್ನು ಬಿಡಬೇಕು ಎಂದು ಪ್ರತಿವಾದಿಗಳು ಮಾನ್ಯ ನಮ್ಮ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ರಿಟ್ ಅರ್ಜಿಯಲ್ಲಿ ನನ್ನಿಂದ ಸದರಿ ಮನೆಯ ಹಣವನ್ನು ಪಡೆದುಕೊಂಡು ನನಗೆ ಮನೆಯನ್ನು ಹಂಚಬೇಕು ಎಂದು ಆದೇಶ ಆಗಿರುತ್ತದೆ ಎಂದರೆ ಸರಿ.

4. ಚಂದ್ರಶೇಖರ್ ಎಂಬುವವರು ಸಾರ್ವಜನಿಕ ಹಿತಾಸಕ್ತಿಯನ್ನು ಮಾನ್ಯ ನಮ್ಮ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯಲ್ಲಿ ನನಗೆ ಸದರಿ ಮನೆಯನ್ನು ಬಿಟ್ಟುಕೊಡಬೇಕು ಎಂದು ಆದೇಶ ಆಗಿರುತ್ತದೆ ಎಂದರೆ ಸರಿ ಹಾಗೂ ನಾನು ಪ್ರತಿವಾದಿಗಳಿಗೆ ನೀಡಿದ 8,25,287/- ರೂ ವಾಪಸ್ಸು ನನಗೆ ನೀಡಬೇಕು ಎಂದು ಆದೇಶ ಆಗಿರುತ್ತದೆ ಎಂದರೆ ಸರಿ.

5. ಸದರಿ ಆದೇಶದ ಮೇಲೆ ನನಗೆ ಪ್ರತಿವಾದಿಗಳು ನೋಟಿಸ್ ಜಾರಿ ಮಾಡಿರುತ್ತಾರೆ ಎಂದರೆ ಸರಿ. ನನಗೆ ಪ್ರತಿವಾದಿಗಳು ನಾನು ನೀಡಿದ ಹಣಕ್ಕೆ ಶೇಖಡ 12 ರಷ್ಟು ಬಡ್ಡಿ ನೀಡಿ ನನ್ನ ಖಾತೆಗೆ ವರ್ಗಾಯಿಸಿರುತ್ತಾರೆ ಎಂದರೆ ಸರಿ.

6. ನಾನು ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ಆದ ನಂತರ ಪ್ರತಿವಾದಿಗಳಿಂದ ನನ್ನ ಹಣವನ್ನು ಪಡೆದುಕೊಂಡು ಬೇರೆ ಕಡೆ ವಾಸವಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯಲ್ಲಿ ಈ ಪ್ರಕರಣವನ್ನು ದಾಖಲಿಸುವ ಸಂದರ್ಭದಲ್ಲಿ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ.

7. ನಾನು ದಾವಾ ಹಾಕುವ ಸಮಯದಲ್ಲಿ ಮತ್ತು ಈಗಲೂ ಸಹ ದಾವಾ ಆಸ್ತಿಯಲ್ಲಿ ವಾಸವಾಗಿರುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ನನ್ನನ್ನು ದಾವಾ ಆಸ್ತಿಯಿಂದ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಹೊರಹಾಕಿದ್ದು ಆದರೂ ಸಹ ನಾನು ದಾವಾ ಆಸ್ತಿಯಲ್ಲಿ ವಾಸವಾಗಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. ನಾನು ಚಂದ್ರಶೇಖರ್ ರವರು ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಪ್ರಶ್ನೆ ಮಾಡಿರುತ್ತೇನೆ ಎಂದರೆ ಸರಿ. ಅದು ಇಲ್ಲಿಯವರೆಗೆ ಚಾಲ್ತಿಯಲ್ಲಿ ಇರುತ್ತದೆ ಎಂದರೆ ಸರಿ.

9. ಸದರಿ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಯಾವುದೇ ಮಧ್ಯದಂತರ ಆದೇಶ ಮಾಡಿರುವುದಿಲ್ಲ ಎಂದರೆ ಸರಿ. ನನಗೆ ಈ ಪ್ರಕರಣದಲ್ಲಿ ಯಾವುದೇ ವಾಜ್ಯ ಕಾರಣ ಇಲ್ಲದೇ ಇದ್ದರೂ ಸಹ ಮತ್ತು ನಾನು ದಾವಾ ಆಸ್ತಿಯಲ್ಲಿ ವಾಸವಾಗದೇ ಇಲ್ಲದೇ ಇದ್ದರೂ ಸಹ ಪ್ರತಿವಾದಿಗಳ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.